



**ಗೌರೀಶ ಕಾಯ್ಕಿಣಿ ಸಾಹಿತ್ಯ ಸಂಚಯ**

ಜಿಜ್ಞಾಸೆ: ಸಂಪುಟ 1 ; ಪು: 640; ಬೆ: ರೂ. 450

ಗಾಳಿಚಿಟ್ಟೆ: ಸಂಪುಟ 2 ; ಪು: 828; ಬೆ: ರೂ. 560

ಒರೆಗಲ್ಲು: ಸಂಪುಟ 3 ; ಪು: 712; ಬೆ: ರೂ. 500

ಮೂರೂ ಪುಸ್ತಕಗಳ ಪ್ರಕಾಶಕರು: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ಫೋನ್: 080 22107704

ಜೀವಂತವಾಗಿಯೇ ಉಳಿಸಿಕೊಳ್ಳುವ ದಾರಿ ಯಾವುದು?

ಘನವಾದ ವ್ಯಕ್ತಿ-ವಿಚಾರಗಳ ಜೊತೆಗಿನ ಒಡನಾಟ ಇಂಥ ದಾರಿಗಳಲ್ಲಿ ಒಂದು. ಈ ಕಾರಣಕ್ಕಾಗಿಯೇ ಗೌರೀಶ ಕಾಯ್ಕಿಣಿ ಅವರ ಬರಹಗಳು, ಜೀವಂತಗೊಳ್ಳಲು ಹಂಬಲಿಸುತ್ತಿರುವ ಸೃಜನಶೀಲ ಮನಸ್ಸುಗಳಿಗೆ ಈ ಕಾಲದ ತುರ್ತು ಔಷಧವಾಗಿ ಒದಗಿ ಬರುತ್ತವೆ.

ಎಂ.ಜಿ. ಹೆಗಡೆ ಸಂಪಾದಿಸಿರುವ ಗೌರೀಶ ಕಾಯ್ಕಿಣಿ ಅವರ ಸಮಗ್ರ ಸಾಹಿತ್ಯದ ಮೂರು ಸಂಪುಟಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ ಇತ್ತೀಚೆಗೆ ಪ್ರಕಟಿಸಿದೆ. 'ಜಿಜ್ಞಾಸೆ', 'ಗಾಳಿಚಿಟ್ಟೆ', 'ಒರೆಗಲ್ಲು' ಹೆಸರಿನ ಮೂರು ಸಂಪುಟದಲ್ಲಿ ಗೌರೀಶರ ಪತ್ರಿಕಾ ಬರಹಗಳು, ವೈಚಾರಿಕ ಬರಹಗಳು, ಸೃಜನಶೀಲ ಸಾಹಿತ್ಯವನ್ನು ಸಂಗ್ರಹಿಸಲಾಗಿದೆ.

ನಮ್ಮ ಕಾಲದ ಓದು, ಬರಹ, ಜೀವನದೃಷ್ಟಿಯಲ್ಲಿನ ತೊಡಕುಗಳನ್ನು ಅರ್ಥಮಾಡಿಕೊಳ್ಳುವುದು ಹೇಗೆ? ಮೊದಲನೆಯದು, ನೇರವಾಗಿ ಅಂಥ ಸವಾಲುಗಳನ್ನೇ ಗುರ್ತಿಸುವುದು. ಎರಡನೆಯದ್ದು, ಘನವಾದ ಚಿಂತನೆಗಳಿಗೆ, ಪ್ರಖರ ವೈಚಾರಿಕ ಮನಸ್ಸುಗಳ ಜೊತೆಗೆ ಅನುಸಂಧಾನ ಮಾಡಿಕೊಳ್ಳುವುದರ ಮೂಲಕ ನಮ್ಮ ಮಿತಿಗಳನ್ನು ಅರಿತುಕೊಳ್ಳುವುದು. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಇದು ಸಮೃದ್ಧಿಯನ್ನು ಕಾಣಿಸುವುದರ ಮೂಲಕವೇ ನಮ್ಮಲ್ಲಿನ ಬರಡುತನದ ಬಗ್ಗೆ ಅರಿವು ಮೂಡಿಸುವುದು. ಈ ದಾರಿಯಲ್ಲಿ ನಮ್ಮ ಮಿತಿಗಳನ್ನು ಅರಿತುಕೊಳ್ಳುತ್ತಲೇ, ಅದನ್ನು ನಿವಾರಿಸಿಕೊಳ್ಳುವ ಪ್ರಕ್ರಿಯೆಯೂ ನಡೆಯುತ್ತಿರುತ್ತದೆ. ಗೌರೀಶರ ಬರಹಗಳ ಓದು ಎರಡನೇ ದಾರಿಯಾಗಿ ನನಗೆ ಕಾಣಿಸಿದೆ.

ಇಲ್ಲಿನ ಲೇಖನಗಳ ಮೂಲಕ ಹೇಳುತ್ತಿರುವ ಸಂಗತಿಗಳಿಂದ ದೊರಕುವ ಒಳನೋಟ ಒಂದು ಬಗೆಯದ್ದು. ಆದರೆ ಈ ಲೇಖನಗಳನ್ನು ಬರೆಯುತ್ತಿರುವ ಮನಸ್ಸಿನ ಪ್ರಖರ ವೈಚಾರಿಕತೆ, ಒರಿಜಿನಲ್ ಥಿಂಕಿಂಗ್, ನಮ್ಮ ಒಳಗಣ್ಣಿನ ದೃಷ್ಟಿಯನ್ನೂ ತಿಳಿಗೊಳಿಸುವ ಕೆಲಸವನ್ನು, ಬದುಕನ್ನು, ಬದುಕಿನಲ್ಲಿನ ಸಂಗತಿಗಳನ್ನು ಗ್ರಹಿಸಬೇಕಾದ ಕ್ರಮವನ್ನು ಕಲಿಸುವ